1

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಭಾರತಿ ಶೆಟ್ಟಿ ಇವರು ನಿಯಮ-72ರಡಿ ಗಮನ ಸೆಳೆದಿರುವ ಸೂಚನೆಗೆ ಉತ್ತರ.**

********

**ವಿಷಯ:**

ಸರ್ಕಾರದ ಹುದ್ದೆಗಳಿಗೆ ಮೀಸಲಾತಿ ಪಡೆಯುವ ಸಂದರ್ಭದಲ್ಲಿ ಅಭ್ಯರ್ಥಿಯ/ ಕುಟುಂಬದ ಆದಾಯವನ್ನು ಪರಿಗಣಿಸಲಾಗುತ್ತದೆ, ಪುರುಷ ಅಭ್ಯರ್ಥಿಯು 21 ವರ್ಷ ದಾಟಿದಾಗ, ಕುಟುಂಬದ ಆದಾಯವನ್ನು ಪರಿಗಣಿಸದೇ ಸ್ವಂತ ಆದಾಯದ ಮೇಲೆ ಮೀಸಲಾತಿ ಪಡೆಯಲು ಸಲ್ಲಿಸಿದ ಅರ್ಜಿ ಮಾನ್ಯವಾಗುತ್ತದೆ.

ಆದರೆ, ಮಹಿಳಾ ಅಭ್ಯರ್ಥಿಯು 21 ದಾಟಿದ ಮೇಲೆ, ಅವಿವಾಹಿತಳಾಗಿದ್ದರೆ, ಕುಟುಂಬದ ಪರಿವ್ಯಾಪ್ತಿಗೆ ಬಂದು, ಕುಟುಂಬದ ಆದಾಯವನ್ನು ಪರಿಗಣಿಸಲಾಗುತ್ತದೆ. ಏಕೆಂದರೆ ಅವಿವಾಹಿತ ಮಹಿಳೆಯು ಸ್ವತಂತ್ರ್ಯಳಾಗಿದ್ದರೂ ಕೂಡಾ ಕಾನೂನಿನ ಪ್ರಕಾರ ತಂದೆ-ತಾಯಿ/ಪೋಷಕರ ವ್ಯಾಪ್ತಿಯ ಒಟ್ಟು ಆದಾಯವನ್ನು ಪರಿಗಣಿಸಲಾಗುತ್ತದೆ.

ಇದರ ಪರಿಣಾಮವಾಗಿ ಪುರುಷ ಮತ್ತು ಸ್ತ್ರೀಯ ನಡುವೆ ತಾರತಮ್ಯವಾಗುತ್ತಿದೆ. ಆದ್ದರಿಂದ ಪ್ರಾಪ್ತ ವಯಸ್ಕ (ಅಂದರೆ 21 ವರ್ಷ ಮೀಸಲಾತಿ ಪಡೆಯಲು ದಾಟಿದ) ಅವಿವಾಹಿತ ಮಹಿಳೆಯನ್ನು ಸ್ವತಂತ್ರ ಎಂದು ಪರಿಗಣಿಸಿ, ಕುಟುಂಬದ ವ್ಯಾಖ್ಯಾನದಲ್ಲಿ ಅಗತ್ಯ ಕಾನೂನು ತಿದ್ದುಪಡಿ ತರಬೇಕೆಂದು ಗಮನ ಸೆಳೆದಿರುವ ಬಗ್ಗೆ.

**<u>ಹೇಳಿಕೆ:</u>**

ರಾಜ್ಯದ ಹಿಂದುಳಿದ ವರ್ಗಗಳಿಗೆ ಮೀಸಲಾತಿ ನೀಡುವ ಸಂಬಂಧ, ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ: 30.03.2022 ಅನುಬಂಧ-2ರ ಹೊಸ ಸಮಗ್ರ ಕೆನೆಪದರ ನೀತಿಯನ್ವಯ ಈ ಕೆಳಕಂಡ ಅರ್ಹತೆಯನ್ನು ನಿಗಧಿಪಡಿಸಲಾಗಿರುತ್ತದೆ.

ಅಭ್ಯರ್ಥಿಯ ಮತ್ತು ಅವರ ತಂದೆ, ತಾಯಿ/ ಪೋಷಕರು, ಸರ್ಕಾರದ ಒಂದನೇ ಅಥವಾ ಎರಡನೇ ದರ್ಜೆಯ ಅಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದರೆ ಅಥವಾ ಸಾರ್ವಜನಿಕ ಉದ್ಯಮಗಳಲ್ಲಿ ತತ್ಸಮಾನವಾದ ಹುದ್ದೆಗಳನ್ನು ಹೊಂದಿದ್ದರೆ ಅಥವಾ ಖಾಸಗಿ ಕೈಗಾರಿಕೆ : ಸಂಸ್ಥೆಗಳ ಉದ್ಯೋಗಿಯಾಗಿದ್ದು, ಎರಡನೆಯ ದರ್ಜೆ ಅಧಿಕಾರಿಯು ಪಡೆಯುತ್ತಿರುವ ವೇತನ ಶ್ರೇಣಿಗಿಂತ ಕಡಿಮೆಯಿಲ್ಲದ ವೇತನ ಶ್ರೇಣಿಯ ವೇತನ ಪಡೆಯುತ್ತಿದ್ದರೆ (ವೇತನ ಶ್ರೇಣಿ ರೂ.6000-11200) (ಪ್ರಸ್ತುತ 43,100-83,900)

ಅಭ್ಯರ್ಥಿಯ ಮತ್ತು ಅವರ ತಂದೆ ತಾಯಿ / ಪೋಷಕರ ವಾರ್ಷಿಕ ಒಟ್ಟು ಆದಾಯ (Gross Income) ರೂ.2.00 ಲಕ್ಷ ಮೀರಿದ್ದರೆ, (ಪ್ರಸ್ತುತ ರೂ.8.00 ಲಕ್ಷಗಳು)

ಅಭ್ಯರ್ಥಿಯ ಮತ್ತು ಅವರ ತಂದೆ /ತಾಯಿ, ಪೋಷಕರ ಸೇರಿದಂತೆ ಕರ್ನಾಟಕ ಭೂ ಸೂಧಾರಣೆ ಕಾಯಿದೆ 1961 ರಡಿಯಲ್ಲಿ ನಿಗಧಿಪಡಿಸಿರುವ 10 ಯುನಿಟ್ ಕೃಷಿ ಭೂಮಿಗಿಂತ ಹೆಚ್ಚು ಕೃಷಿ ಭೂಮಿ ಹೊಂದಿರುವವರು ಆದರೆ, ಪ್ಲಾಂಟೇಶನ್ ಬೆಳೆಗಳನ್ನು ಬೆಳೆಯುವ ಭೂಮಿಗೆ ಸಂಬಂಧಿಸಿದಂತೆ 20 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವವರು.

ಮುಂದುವರೆದು, ಕುಟುಂಬದ ಉತ್ಪನ್ನವನ್ನು ಪರಿಗಣಿಸುವಾಗ ಸರ್ಕಾರದ ಆದೇಶ ಸಂಖ್ಯೆ: ಡಿಪಿಎಆರ್ 28 ಎಸ್‌ಬಿಸಿ 86, ದಿನಾಂಕ: 12-12-1986 ಆದೇಶದಲ್ಲಿ ಈ ಕೆಳಕಂಡಂತೆ ಸ್ಪಷ್ಟೀಕರಿಸಲಾಗಿರುತ್ತದೆ.

(ಅ) "ಕುಟುಂಬದ ಉತ್ಪನ್ನ" (ಫ್ಯಾಮಿಲಿ ಇನ್‌ಕಂ) ಎಷ್ಟೆಂದು ನಿಗಧಿಪಡಿಸುವುದಕ್ಕಾಗಿ ಅರ್ಜಿದಾರನ ಉತ್ಪನ್ನಕ್ಕೆ ಅವನ ತಂದೆ ತಾಯಿಗಳ ಉತ್ಪನ್ನವನ್ನು ಸೇರಿಸಬೇಕು, ಅರ್ಜಿದಾರನು ತನ್ನ ತಂದೆ ತಾಯಿಗಳಿಂದ ಕಾನೂನಿನ ಪ್ರಕಾರ ನೊಂದಾಯಿಸಿದ ದಾಖಲೆಗಳ ಮೂಲಕ ಬೇರ್ಪಟ್ಟಿದ್ದರೂ ಅವನ ಉತ್ಪನ್ನಕ್ಕೆ ಅವನ ತಂದೆ ತಾಯಿಗಳ ಉತ್ಪನ್ನ ಸೇರಿಸಬೇಕು.

(ಆ) ವಿವಾಹಿತ ಮಹಿಳಾ ಅರ್ಜಿದಾರಳ ಉತ್ಪನ್ನಕ್ಕೆ ಅವಳ ತಂದೆ ತಾಯಿಗಳ ಸೇರಿಸಬಾರದು. ಅಂಥ ಪ್ರಕರಣಗಳಲ್ಲಿ ಪತಿ-ಪತ್ನಿ ಒಂದು ಸ್ವಾಯತ್ತ ಕುಟುಂಬದಂತೆ ಪ್ರತ್ಯೇಕವಾಗಿ ವಾಸಿಸುತ್ತಿದ್ದಲ್ಲಿ ಅರ್ಜಿದಾರಳ ಉತ್ಪನ್ನ ಮತ್ತು ಅವಿಭಕ್ತ ಕುಟುಂಬದ ಉತ್ಪನ್ನವನ್ನು ಒಟ್ಟಿಗೆ ಸೇರಿಸಿ ಕುಟುಂಬದ ಉತ್ಪನ್ನವನ್ನು ಕಂಡು ಹಿಡಿಯಬೇಕು.

(ಇ) ಅರ್ಜಿದಾರಳು ವಿಧವೆಯಾಗಿದ್ದಲ್ಲಿ ಅವಳು ಎಲ್ಲಿದ್ದರೂ ಅವಳ ಉತ್ಪನ್ನ ಮಾತ್ರ ಪರಿಗಣಿಸಬೇಕು.

ಅಭ್ಯರ್ಥಿಯು ಹಿಂದುಳಿದ ವರ್ಗಗಳ ಮೀಸಲಾತಿ ಪಡೆಯುವ ಸಂಬಂಧ ಕುಟುಂಬದ ಉತ್ಪನ್ನವನ್ನು ಪರಿಗಣಿಸಲು ಮೇಲಿನ ಆದೇಶಗಳನ್ವಯ ಮಾನದಂಡಗಳನ್ನು ಅನುಸರಿಸಲಾಗುತ್ತಿದ್ದು, ಲಿಂಗ ತಾರತಮ್ಯ ಉಂಟಾಗುತ್ತಿರುವುದಿಲ್ಲದ ಕಾರಣ ಈ ಬಗ್ಗೆ ಕಾನೂನು ತಿದ್ದುಪಡಿ ತರುವ ಅಗತ್ಯತೆ ಕಂಡುಬರುವುದಿಲ್ಲ.

**ಸಂಖ್ಯೆ**:ಹಿಂವಕ 180 ಬಿಸಿಎ 2022

**(ಕೋಟಾ ಶ್ರೀನಿವಾಸ ಪೂಜಾರಿ)**
ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ
ಕಲ್ಯಾಣ ಸಚಿವರು

C 110